Indian Journal of History and Archaeology

ISSN (E):2582-225X
VOL-2, ISSUE -2, JULY-AUGUEST, 2020, 32-37

# ಶೃಂಗೇರಿ ಮಠದ ಶರನ್ನವರಾತ್ರಿ, ವಿಜಯದಶಮಿ ಮೆರವಣಿಗೆಯ ಐತಿಹಾಸಿಕ ಅಧ್ಯಯನ

**ಪ್ರಶಾಂತ್.ಕೆ.ಜಿ.**

**ಪ್ರಶಾಂತ್.ಕೆ.ಜಿ.**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ

ಆಚರಣೆ, ಉತ್ಸವ, ಸಂಪ್ರದಾಯ, ರೂಢಿ, ಮೆರವಣಿಗೆ, ಹಬ್ಬ ಮುಂತಾದವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು ಅಲೋಕಿಸಿದಾಗ ಇವುಗಳಲ್ಲಿ ಇತಿಹಾಸವೂ ಅಂತರ್ಗತವಾಗಿದ್ದು ಚರಿತ್ರೆಯನ್ನು ಕಟ್ಟುವಲ್ಲಿ ಹಾಗೂ ಅರ್ಥೈಸುವಲ್ಲಿ ಸಹಕರಿಸುತ್ತದೆ. ಈ ಸಾಂಸ್ಕೃತಿಕ ಆಚರಣೆಗಳು ಪ್ರಾಚೀನ ಇತಿಹಾಸಕ್ಕೆ ಕೊಂಡಿಯಾಗಿ ಪರಿಣಮಿಸಿವೆ.

ಪ್ರಸ್ತುತ ಶೃಂಗೇರಿ ಮಠದಲ್ಲಿ ಇಂದಿಗೂ ವಿಜೃಂಭಣೆಯಿಂದ ಆಚರಿಸಲ್ಪಡುತ್ತಿರುವ ದರ್ಬಾರ್ ಹಾಗೂ ವಿಜಯದಶಮಿಯ ಅಡ್ಡಪಲ್ಲಕ್ಕಿ ಮೆರವಣಿಗೆಯು ಶೃಂಗೇರಿ ಮಠಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಇರುವ ಐತಿಹಾಸಿಕ ನಂಟನ್ನು ಸಾರುತ್ತದೆ. ಹಾಗೂ ಶೃಂಗೇರಿಗೂ ಭಾರತದ ಹಲವು ಸಂಸ್ಥಾನಕ್ಕೂ ಇರುವ ಸಂಬಂಧಕ್ಕೆ ಸಾಕ್ಷಿಯಾಗಿ, ಕಾಲಕಾಲಕ್ಕೆ ಸಮಕಾಲೀನ ಪರಂಪರೆ ಹಾಗೂ ಆಚರಣೆಗಳ ಪ್ರಭಾವವನ್ನು ಇಂದಿಗೂ ಶೃಂಗೇರಿ ಮಠದಲ್ಲಿ ನಾವು ಕಾಣಬಹುದಾಗಿದೆ.

ಕ್ರಿ.ಶ. 1336 ರಲ್ಲಿ ಶೃಂಗೇರಿಯ ಗುರು ಶ್ರೀವಿದ್ಯಾರಣ್ಯರಿಂದ ವಿಜಯನಗರ ಸಾಮ್ರಾಜ್ಯ ನಿರ್ಮಾಣವಾದ ನಂತರ ಸುಮಾರು ಅರೂ ಮುಕ್ಕಾಲು ಶತಮಾನಗಳ ಸುದೀರ್ಘ ಕಾಲಾವಧಿಯ ನಂತರವೂ ಈ ಪರಂಪರೆಯು ಶೃಂಗೇರಿ ಮಠದಲ್ಲಿ ಮುಂದುವರೆದುಕೊಂಡು ಬಂದಿರುವುದು ಗತವೈಭವ ಹಾಗೂ ಇತಿಹಾಸಕ್ಕೆ ಜೀವಂತ ಸಾಕ್ಷಿಭೂತವಾಗಿದೆ.

**ಲೇಖನದ ಉದ್ದೇಶ:** ಕಾಲಕಾಲಕ್ಕೆ ಇತಿಹಾಸ ಮತ್ತು ಪರಂಪರೆಗಳನ್ನು ಲಿಖಿತರೂಪದಲ್ಲಿ ದಾಖಲಿಸುವಿಕೆಯು ಅತ್ಯಗತ್ಯವಾಗಿದ್ದು, ಮುಂದಿನ ಪೀಳಿಗೆಗೆ ಈ ಆಚರಣೆಗಳ ಮುಂದುವರಿಕೆಗೆ ಹಾಗೂ ಇತಿಹಾಸ ಸಂಶೋಧಕರಿಗೆ ಇದು ಸಹಕಾರಿಯಾಗುತ್ತದೆ.

ಇತಿಹಾಸ – ಪರಂಪರೆ ಹಾಗೂ ಆಚರಣೆಗಳನ್ನು ಕೇವಲ ಲಿಖಿತರೂಪದ ಮಾಹಿತಿಯಲ್ಲಿ ತನ್ನದೇ ಆದ ಇತಿಮಿತಿಯನ್ನು ಹೊಂದಿದೆ. ರೇಖಾಚಿತ್ರಗಳು, ಛಾಯಾಚಿತ್ರಗಳು, ಕಲಾಕೃತಿಗಳು ಇವೇ ಮುಂತಾದ ದೃಶ್ಯ ಮಾಧ್ಯಮದ ದಾಖಲೆಗಳು ಸಂಸ್ಕೃತಿ ಮತ್ತು ಪರಂಪರೆ ಹಾಗೂ ಆಚರಣೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಮುಂದಿನ ಪೀಳಿಗೆಗೆ ರವಾನಿಸುವುದಕ್ಕೆ ಮಹತ್ತರವಾದ ಸಹಾಯವನ್ನು ನೀಡುತ್ತವೆ.

ಶೃಂಗೇರಿ ಮಠದಲ್ಲಿ ಪ್ರತೀ ಶರನ್ನವರಾತ್ರಿಯಲ್ಲಿ ಆಚರಿಸಲ್ಪಡುತ್ತಿರುವ ದರ್ಬಾರ್ ಹಾಗೂ ವಿಜಯದಶಮಿಯ ಮೆರವಣಿಗೆಆರೂ ಮುಕ್ಕಾಲು ಶತಮಾನಗಳ ಇತಿಹಾಸವನ್ನು ಹೊಂದಿದಾಗಿದ್ದು. ಕ್ರಿ..ಶ 1336 ರಲ್ಲಿ ಶೃಂಗೇರಿಯ ಗುರುಗಳಾಗಿದ್ದ ಶ್ರೀ ವಿದ್ಯಾರಣ್ಯರು ಸಂಗಮ ಸಹೋದರ ಹರಿಹರ ಬುಕ್ಕರಾಯರಿಗೆ ಆತ್ಮವಿದ್ಯೆಯನ್ನು ಭೋದಿಸಿ ವಿಜಯನಗರವೆಂಬ ಮಹಾಸಾಮ್ರಾಜ್ಯ ನಿರ್ಮಿಸಲು ಅಂತಃಪ್ರೇರಣೆ ನೀಡಿದ್ದು ಭಾರತದ ಇತಿಹಾಸದ ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ.

ಶ್ರೀ ವಿದ್ಯಾರಣ್ಯರ ಕೃಪಾಶೀರ್ವಾದದಿಂದ ಹರಿಹರ–ಬುಕ್ಕರಾಜರು ಯುದ್ಧದಲ್ಲಿ ಪದೇ ಪದೇ ವಿಜಯವನ್ನು ಗಳಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಹಾಗೂ ಯುದ್ಧಗಳಲ್ಲಿನ ವಿಜಯವು ಶ್ರೀ ವಿದ್ಯಾರಣ್ಯರ ಕೃಪೆಯಿಂದಲೇ ಆಗಿದೆ ಎಂದು ಶ್ರೀ ವಿದ್ಯಾರಣ್ಯರನ್ನು ರಾಜಗುರುಗಳೆಂದು ಸ್ವೀಕರಿಸಿ ಮಕರತೋರಣ, ಶ್ವೇತಛತ್ರ, ಉಭಯಚಾಮರ, ಡಕ್ಕುವಾದ್ಯ, ಚಿನ್ನದದಂಡ, ಚೌರಿ, ಹಗಲು ದೀವಟಿಗೆ ಬಂಗಾರದ ಅಡ್ಡಪಲ್ಲಕ್ಕಿ ಇತ್ಯಾದಿ ರಾಜರುಗಳಿಗೆ ಯೋಗ್ಯವಾದ ರಾಜಲಾಂಛನಾದಿಗಳನ್ನು ಗುರು ವಿದ್ಯಾರಣ್ಯರಿಗೆ ಗೌರವ ಪೂರ್ವಕವಾಗಿ ಸಮರ್ಪಿಸಿದರೆಂದು ಹಲವಾರು (1336 ತಾಮ್ರಶಾಸನ, 1384 ಬೆಳಗೊಳ) ಶಾಸನ, ಗುರುವಂಶ ಕಾವ್ಯ ಮುಂತಾದ ಚಾರಿತ್ರಿಕ ಆಧಾರಗಳಿಂದ ತಿಳಿದುಬರುತ್ತದೆ. ಅಂದಿನಿಂದ ಶೃಂಗೇರಿ"ಜಗದ್ಗುರುಗಳವರು ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದಾವಳಿಯ ಹೆಗ್ಗಳಿಕೆಗೆ ಪಾತ್ರರಾದರು. ಇಂದಿಗೂ ಶೃಂಗೇರಿ ಗುರುಗಳು, ಶೃಂಗೇರಿ ಗುರುಗಳ ಸಕಲ ಬಿರುದಾವಳಿಗಳ ಜೊತೆಯಲ್ಲಿ ರೂಢಿಯಲ್ಲಿರುವ ಈ ಬಿರುದಾವಳಿಯು ವಿಜಯನಗರವೆಂಬ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಯಲ್ಲಿಗುರು ವಿದ್ಯಾರಣ್ಯರ ಪಾತ್ರವನ್ನು ಸಾರುತ್ತಿದೆ.

ವಿಜಯನಗರದ ವಿರೂಪಾಕ್ಷ ದೇವಾಲಯದ ಛಾವಡಿಯಲ್ಲಿ ವಿದ್ಯಾರಣ್ಯರ ಅಡ್ಡಪಲ್ಲಕ್ಕಿಯ ಸುಂದರವಾದ ಮೆರವಣಿಗೆಯ ಚಿತ್ರವು ಶೃಂಗೇರಿ ಮಠಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಇರುವ ಐತಿಹಾಸಿಕ ಸಂಬಂಧಕ್ಕೆ ಪ್ರತ್ಯಕ್ಷ ಪ್ರಮಾಣವಾಗಿ ಅಂದಿನ ಕಾಲದಲ್ಲಿ ರಾಜರು ಶ್ರೀ ವಿದ್ಯಾರಣ್ಯರಿಗೆ ಕೊಟ್ಟ ರಾಜ ಗೌರವದ ಪ್ರತಿಬಿಂಬವಾಗಿದೆ.

ವಿಜಯನಗರದ ಪತನಾನಂತರ ಸಾಮಂತ ರಾಜರುಗಳು ಶೃಂಗೇರಿಯಧರ್ಮ ಸಂಸ್ಥಾನಕ್ಕೆ ಪೂರ್ವ ಮರ್ಯಾದೆಯಂತೆ ರಾಜ ಗೌರವ ಹಾಗೂ ರಾಜಾಶ್ರಯವನ್ನಿತ್ತು ಮಠಕ್ಕೆ ದಾನ–ದತ್ತಿಗಳನ್ನು ಮಾಡಿ ಮಠದ ಶ್ರೇಯೋಭಿವೃದ್ಧಿಗೆ ಕಾರಣರಾದುದಷ್ಟೇ ಅಲ್ಲದೆ ರಾಜ್ಯದ ಹಾಗೂ ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ಶೃಂಗೇರಿ ಗುರುಗಳ ಆಶೀರ್ವಾದ ಪಡೆದುಯಶಸ್ಸನ್ನು ಪಡೆದವರೆಂದು ಚಾರಿತ್ರಿಕ ದಾಖಲೆಗಳು ಸಾರುತ್ತಿವೆ.

ಕಳದಿ, ಮೈಸೂರು, ತ್ರಾವೆಂಕೋರ್, ಕೊಚ್ಚಿನ್, ನೇಪಾಳ ಮುಂತಾದ ಸಂಸ್ಥಾನಗಳು ಶೃಂಗೇರಿ ಜಗದ್ಗುರುಗಳಿಗೆ ಕಾಲಕಾಲಕ್ಕೆ ಹಲವಾರು ರಾಜಲಾಂಛನಗಳ ಗೌರವವನ್ನು ನೀಡಿದ ದಾಖಲೆಗಳಿವೆ. ಪ್ರಸ್ತುತ ಶೃಂಗೇರಿ ಜಗದ್ಗುರುಗಳವರು ಶರನ್ನವರಾತ್ರಿಯ ದರ್ಬಾರ್‌ನಲ್ಲಿಧರಿಸುವ ನವರತ್ನ ಖಚಿತ ಕಿರೀಟವು ಮೈಸೂರು ಶ್ರೀ ಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಣಿಕೆಯಾಗಿದೆ. ಕೊರಳಿಗೆ ಧರಿಸುವ ಪಚ್ಚೆಯ ಮಕರ ಕಂಠೀಹಾರವು ಟಿಪ್ಪು ಸುಲ್ತಾನನ ಭಕ್ತಿ ಪೂರ್ವಕಕಾಣಿಕೆಯಾಗಿದೆ. ಜಗದ್ಗುರುಗಳವರು ಆಸೀನರಾಗುವ ಸುಂದರ ಕುಸುರಿಯ ರಜತ ಸಿಂಹಾಸನವು ಜಮಖಂಡಿ ರಾಮಚಂದ್ರ ಪಟುವರ್ಧನ ಮಹಾರಾಜರ ಕೊಡುಗೆಯಾಗಿದೆ. ಈ ದರ್ಬಾರ್ ಎಂಬ ಆಚರಣೆಯನ್ನು ವಿಜಯನಗರದ ದೊರೆಗಳು ವಿಜಯೋತ್ಸವದ ಆಚರಣೆಗಾಗಿ ಹಂಪಿಯ ಮಹಾನವಮಿ ದಿಬ್ಬದಲ್ಲಿ ಸಂಸ್ಥಾನದ ಸಾಂಸ್ಕೃತಿಕ ವೈಭವವನ್ನು ಅನಾವರಣಗೊಳಿಸಲು ಪ್ರಾರಂಬಿಸಿದರು. ವಿಜಯನಗರದ ದೊರೆಗಳಿಗೆ ಶೃಂಗೇರಿ ಶ್ರೀ ವಿದ್ಯಾರಣ್ಯರು ರಾಜಗುರುಗಳಾಗಿದ್ದರಿಂದ ದೊರೆಗಳ ಅಪೇಕ್ಷೆಯ ಮೇರೆಗೆ ಈ ದರ್ಬಾರ್ ಆಚರಣೆಯ ಸಂಪ್ರದಾಯವು ಶೃಂಗೇರಿ ಮಠದಲ್ಲೂ ಪ್ರಾರಂಭಗೊಂಡಿತು. ಹೀಗೆ ಶೃಂಗೇರಿ ಮಠದಲ್ಲಿ ಇಂದಿಗೂ ಸಾಂಪ್ರಾದಾಯಿಕವಾಗಿ ಆಚರಸಲ್ಪಡುತ್ತಿರುವ ದರ್ಬಾರ್ ಹಾಗೂ ವಿಜಯದಶಮಿಯ ಅಡ್ಡಪಲ್ಲಕ್ಕಿ ಉತ್ಸವವು ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಅಷ್ಟೇ ಅಲ್ಲದೆ ಐತಿಹಾಸಿಕವಾಗಿಯೂ ಪ್ರಾಮುಖ್ಯತೆಯನ್ನು ಪಡೆದಿದೆನ್ನಬಹುದು.

ವಿಜಯನಗರದ ಸಾಮಂತರಾದ ಮೈಸೂರು ಒಡೆಯರ ಸಂಸ್ಥಾನವು ವಿಜಯನಗರದ ಸಂಪ್ರದಾಯಗಳನ್ನು ಉತ್ತರಾಧಿಕಾರದ ರೂಪದಲ್ಲಿ ಪಡೆದಿದ್ದರಿಂದ ಮೈಸೂರು ಒಡೆಯರು ಶೃಂಗೇರಿ ಜಗದ್ಗುರುಗಳನ್ನು ರಾಜಗುರುಗಳೆಂದು ಸ್ವೀಕರಿಸಿ ಮಠವನ್ನುಪೋಷಿಸಿ ರಾಜಾಶ್ರಯವನ್ನಿತ್ತರು. ಮೈಸೂರಿನ ದರ್ಬಾರಿನ ಶೈಲಿಯ ಪ್ರಭಾವವನ್ನು ಶಂಗೇರಿ ಮಠದ ದರ್ಬಾರಿನಲ್ಲಿ ಇಂದಿಗೂ ಕಾಣಬಹುದಾಗಿದೆ.

ಶೃಂಗೇರಿ ಮಠದ ಹಲವಾರು ಆಚರಣೆಗಳ ಸಾಮ್ಯತೆಯನ್ನು ಮೈಸೂರು ಸಂಸ್ಥಾನದಲ್ಲಿ ಕಾಣಬಹುದಾಗಿದೆ. ಮೈಸೂರಿನ ಅರಮನೆಯಲ್ಲಿ ಮಹಾರಾಜರುರತ್ನ ಸಿಂಹಾಸಾರೂಢರಾಗುವ ಸಂದರ್ಭದಲ್ಲಿ ಮಹಾರಾಜರು ಇಂದಿಗೂ ಶೃಂಗೇರಿ ಮಠದ ಮಹಾಪ್ರಸಾದವನ್ನು ಸ್ವೀಕರಿಸುವ ಸಂಪ್ರದಾಯವಿದೆ. ಮೈಸೂರು ಮಹಾರಾಜ ಶ್ರಿ ಚಾಮರಾಜೇಂದ್ರ ಒಡೆಯರ್‌ರವರಿಗೆ ಮೈಸೂರಿನ ಅರಮನೆಯಲ್ಲಿರುವ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಸ್ವಾಮಿಗಳು ಕ್ರಿ.ಶ. ೧೮೮೫ ರಲ್ಲಿ ನೀಡಿದ ರತ್ನಕಿರೀಟವು ಇಂದಿಗೂ ದಸರಾ ಹಬ್ಬದ ಸಂದರ್ಭದಲ್ಲಿ ಶ್ರೀ ಮನ್ಮಹಾರಾಜರಿಂದಲೇ ಪೂಜಿಸಲ್ಪಡುತ್ತಿದೆ.

ಜಗದ್ಗುರುಗಳವರು ರಾಜಪೋಷಾಕಿನಲ್ಲಿ ಸಿಂಹಾಸನಾ ರೂಢರಾಗಲು ಕರೆತರುವ ಮೆರವಣಿಗೆಯು ಹಸ್ತ ಲಾಘವ, ಚೌರಿ, ಚಾಮರ, ದೀವಿಟಿಗೆ, ವಾದ್ಯ, ಮಕರತೋರಣ ಇತ್ಯಾದಿ ಪ್ರಾಚೀನ ಉತ್ಸವ ಪರಿಕರಗಳಿಂದ ಕೂಡಿರುತ್ತದೆ. ಚಿನ್ನದ ದಂಡ ಹಿಡಿದವರು ವಿಜಯನಗರ ಹಾಗೂ ಮೈಸೂರು ಸಂಸ್ಥಾನದ ಸಂಮ್ಮಿಶ್ರಿತ ಶೈಲಿಯ ಪೇಟ, ವಸ್ತ್ರ, ಸೊಂಟದ ಡಾಬು, ಹಂಸ ಲಾಂಛನ ಮುಂತಾದ ಸಾಂಪ್ರದಾಯಿಕ ವೇಷ-ಭೂಷಣಗಳನ್ನು ತೊಡುತ್ತಾರೆ. ಸಾಂಪ್ರದಾಯಿಕ ಪೇಟ ಮತ್ತು ವಸ್ತ್ರದ ಉಡುಗೆ ಧರಿಸಿದ ಚಿನ್ನದದಂಡ ಹಿಡಿದ ಪಾಠಕರು ಸಂಸ್ಕೃತದಲ್ಲಿ ಜಗದ್ಗುರುಗಳವರಿಗೆ ಪರಾಕ್‌ನ್ನೂ ಶಾರದಾಂಬೆಯನ್ನು ವರ್ಣಿಸುವ ಪಾಠಕವನ್ನು ದರ್ಬಾರ್ ಆಚರಣೆಯಲ್ಲಿ ಹೇಳುವ ಪರಿಪಾಠವಿದೆ.

ಟಿಪ್ಪು ಸುಲ್ತಾನ್ ಶೃಂಗೇರಿ ಮಠಕ್ಕೆ ಹಲವಾರು ಬಾರಿ ಚೌರಿಗಳನ್ನು ಕಳಿಸಿದ ದಾಖಲೆಗಳಿವೆ. ಈ ಚೌರಿಗಳನ್ನು ದರ್ಬಾರ್ ಹಾಗೂ ಉತ್ಸವದ ಸಂದರ್ಭದಲ್ಲಿ ಜಗದ್ಗುರುಗಳವರ ಪಲ್ಲಕ್ಕಿಯ ಇಕ್ಕೆಲಗಳಲ್ಲಿ ಹಿಡಿಯಲಾಗುತ್ತದೆ. ವಿಜಯನಗರ ಹಾಗೂ ಮೈಸೂರು ರಾಜ ಸಂಸ್ಥಾನಗಳಲ್ಲಿ ಚೌರಿ, ಶ್ವೇತಛತ್ರ, ಡಕ್ಕುವಾದ್ಯ ಮುಂತಾದ ಉತ್ಸವ ಪರಿಕರಗಳ ಬಳಕೆಯನ್ನು ಕಲಾಕೃತಿಗಳಿಂದ ನಾವು ತಿಳಿಯಬಹುದಾಗಿದೆ.

ಹಂಪಿಯ ವಿದ್ಯಾರಣ್ಯರ ಮೆರವಣಿಗೆಯ ಚಿತ್ರದಲ್ಲಿ ಕಹಳೆ, ಉಭಯ ಚಾಮರ ಇತ್ಯಾದಿ ರಾಜಲಾಂಛನಗಳನ್ನು ನಾವು ಕಾಣಬಹುದಾಗಿದೆ. ಕಹಳೆಯು ವಿಜಯದ ಸಂಕೇತವಾದ್ದರಿಂದ ಶ್ರೀ ವಿದ್ಯಾರಣ್ಯರು ಹಕ್ಕ-ಬುಕ್ಕರಿಗೆ ವಿಜಯವನ್ನು ತಂದು ಕೊಟ್ಟಿದ್ದುದನ್ನು ಸಂಕೇತಿಸುತ್ತದೆ.

ಶೃಂಗೇರಿ ಮಠದ ವಿಜಯದಶಮಿಯ ಅಡ್ಡಪಲ್ಲಕ್ಕಿ ಉತ್ಸವದ ಇನ್ನೊಂದು ಐತಿಹಾಸಿಕ ವಿಶೇಷವೆಂದರೆ ಮೆರವಣಿಗೆಯ ಮುಂದೆ ಅಲಂಕೃತ ಆನೆಯ ಮೇಲೆ ಮೈಸೂರು ಸಾಂಪ್ರದಾಯಿಕ ಪೇಟ ಹಾಗೂ ವಸ್ತ್ರವನ್ನು ಧರಿಸಿದ ಮಾವುತನು ಹಿಡಿದ ಧ್ವಜದಲ್ಲಿ ಒಂದು ಕಡೆ ಶೃಂಗೇರಿ ಮಠದ ಲಾಂಛನವಾದ ಹಂಸವನ್ನೂ ಇನ್ನೊಂದು ಕಡೆ ಕರ್ನಾಟಕದ ಭೂಪಟದ ಚಿತ್ರವನ್ನು ಕಾಣಬಹುದಾಗಿದೆ. ಈ ಕರ್ನಾಟಕದ

ಚಿತ್ರವು ವಿಜಯನಗರವೆಂಬ ಸಾಮ್ರಾಜ್ಯದ ನಿರ್ಮಾಣದಲ್ಲಿ ಶೃಂಗೇರಿ ಗುರುಗಳ ಪಾತ್ರವನ್ನು ಸಾಕ್ಷೀಕರಿಸುತ್ತಾ ಇತಿಹಾಸವನ್ನು ಪ್ರತ್ಯಕ್ಷ ಹಾಗೂ ಪ್ರಮಾಣವಾಗಿ ಇಂದಿಗೂ ಸಾರುತ್ತಿದೆ.

ಹೀಗೆ ಶೃಂಗೇರಿಯ ಧರ್ಮಸಂಸ್ಥಾನದಲ್ಲಿ ಇಂದಿಗೂ ಆಚರಿಸಲ್ಪಡುತ್ತಿರುವ ದಸರಾ ದರ್ಬಾರ್ ಹಾಗೂ ವಿಜಯದಶಮಿ ಮೆರವಣಿಗೆಯು ೬೮೨ ವರ್ಷಗಳ ಇತಿಹಾಸ, ಪರಂಪರೆ, ಸಂಪ್ರದಾಯ ಹಾಗೂ ಸಾಂಸ್ಕೃತಿಕ ಹಿರಿಮೆ ಹಾಗೂ ವೈಭವದ ಸಂಕೇತವಾಗಿ ಪರಿಣಮಿಸಿದೆ.

ಮೈಸೂರಿನ ರಾಜವಂಶಸ್ಥರು ರತ್ನ ಸಿಂಹಾಸನಾ ರೂಢರಾಗಿ ದರ್ಬಾರ್ ಆಚರಿಸುವಾಗ 'ಶ್ರೀಮದ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯ'ಇತ್ಯಾದಿ ಶೃಂಗೇರಿ ಗುರುಗಳಿಗೆ ವಿಜಯನಗರ ಕಾಲದಿಂದ ರೂಢಿಯಲ್ಲಿರುವ ಬಿರುದಾವಳಿಗಳನ್ನು ಪಠಿಸಿ ಮಹಾರಾಜರಿಗೆ ಆಶೀರ್ವಾದ ಮಂತ್ರದೊಂದಿಗೆ ಇಂದಿಗೂ ಪ್ರತಿವರ್ಷ ಶೃಂಗೇರಿಯ ಪ್ರಸಾದವು ಸಮರ್ಪಣೆಯಾಗುವ ಪದ್ಧತಿಯು ಮೈಸೂರು ಅರಮನೆಯಲ್ಲಿ ಇಂದಿಗೂ ರೂಢಿಯಲ್ಲಿರುವುದು ಗಮನಾರ್ಹವಾಗಿದೆ. ದರ್ಬಾರಿನ ಸಂದರ್ಭದಲ್ಲಿ ಸಂಸ್ಕೃತದಲ್ಲಿ ಹೇಳಲ್ಪಡುವ ಪಾಠಕದಲ್ಲಿ 'ವಿದ್ಯಾನಗರ ರಾಜಧಾನಿ','ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ', 'ತುಂಗ–ಭದ್ರಾತೀರವಾಸೀ'ಇತ್ಯಾದಿ ಉಲ್ಲೇಖಗಳು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಗುರು ವಿದ್ಯಾರಣ್ಯರ ಪಾತ್ರವನ್ನು ಪುಷ್ಟೀಕರಿಸುವ ಜ್ವಲಂತ ಉದಾಹರಣೆಯಾಗಿ ನಿಲ್ಲುತ್ತದೆ.

**ಉಪಸಂಹಾರ**

1) ರೇಖಾಚಿತ್ರ, ಛಾಯಾಚಿತ್ರ ಹಾಗೂ ಭಿತ್ತಿಚಿತ್ರ ಮುಂತಾದ ದೃಶ್ಯ ಮಾಧ್ಯಮಗಳ ಆಧಾರಗಳು.
೨) ಶೃಂಗೇರಿ ಮಠ ಹಾಗೂ ರಾಜಮನೆತನಗಳ ಪ್ರಚಲಿತ ಸಂಪ್ರದಾಯಗಳು.
೩) ಸಿಂಹಾಸನ, ಕಿರೀಟ ಮುಂತಾದ ಕಾಣಿಕೆಗಳು ಹಾಗೂ ಪತ್ರಾಧಾರಗಳು ಈ ಮೂರು ಆಕರಗಳ ಸೂಕ್ಷ್ಮ ಅಧ್ಯಯನದಿಂದ ಶೃಂಗೇರಿ ಮಠದ ಸುಮಾರು ಆರು ಮುಕ್ಕಾಲು ಶತಮಾನದ ಇತಿಹಾಸ ಮತ್ತು ಪರಂಪರೆಯನ್ನು ಈ ಲೇಖನದಲ್ಲಿ ಚಿತ್ರಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಗ್ರಂಥಋಣ:**

1) ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, 1916, ಆರ್ಕಿಯಾಲಜಿ ಸರ್ವೇ ಆಫ್ ಇಂಡಿಯಾ, ಮೈಸೂರು.
2) ಎಫಿಗ್ರಾಫಿಯಾ ಕರ್ನಾಟಿಕಾ, 1998, ಸಂಪುಟ 11, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
3) ಕನ್ನಡ ವಿಷಯ ವಿಶ್ವಕೋಶ (ಇತಿಹಾಸ ಮತ್ತು ಪುರಾತತ್ವ), 2009, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
4) ಹೆಗಡೆ ರಾಜರಾಮ, 2001, ರಾಜಪ್ರಭುತ್ವ ಮತ್ತು ಮತಧರ್ಮ, ಪ್ರಸಾರಾಂಗ, ಕುವೆಂಪು ವಿ.ವಿ.
5) ಪ್ರಶಾಂತ್, 2007, ಶ್ರೀ ಶೃಂಗೇರಿ ಶಾರದಾ ಪೀಠ ಮತ್ತು ಮೈಸೂರು ಸಂಸ್ಥಾನ, ಶೃಂಗೇರಿ ಮಠ, ಶೃಂಗೇರಿ.
6) ಗೋಪಾಲ್‌ಆರ್, 2008, ದಿವಾನ್ ಪೂರ್ಣಯ್ಯ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
7) ಶಾಸ್ತ್ರಿ ಲಕ್ಷ್ಮಣ, 1966, ಗುರುವಂಶಕಾವ್ಯ, ಶ್ರೀರಂಗಂ.
8) ಶಾಸ್ತ್ರಿಶಾಮ, 1921, 1973, ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ', ಕನ್ನಡಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
9) ಶಾಸ್ತ್ರಿ ಎ.ಕೆ, 2009, ದಿ ರೆಕಾರ್ಡ್ಸ್ ಆಫ್ ದಿ ಶೃಂಗೇರಿ ಧರ್ಮ ಸಂಸ್ಥಾನ, ಶೃಂಗೇರಿ ಮಠ.
10) ಕೆ.ಆರ್. ವೆಂಕಟರಾಮನ್, 1998, ದಿ ತ್ರೋನ್ ಆಫ್ ಟ್ರಾನ್ಸಿಡೆಂಟಲ್ ವಿಸ್ಡಮ್, ಸಂಪುಟ 2, ಮದ್ರಾಸ್.